# ನನ್ನ ಆಹಾರದಲ್ಲಿ ಕೀಟನಾಶಕಗಳಿವೆಯೇ? ಹಾಗಿದ್ದರೆ ನನಗದು ಬೇಡ... !!

'ದಿನಕ್ಕೊಂದು ಸೇಬು ತಿನ್ನಿ; ಒಳ್ಳೆಯ ಆರೋಗ್ಯವನ್ನು ದೂರವಿಡಿ'... ಹೌದು..! ಈ ವಾಕ್ಯವನ್ನು ನೀವು ಸರಿಯಾಗಿಯೇ ಗ್ರಹಿಸಿದ್ದೀರಿ!! ಹೆಪ್ಟಾಕ್ಲೋರ್, ಕ್ಲೋರ್‌ಡೇನ್ ಹಾಗೂ ಡಿಡಿಟಿಯಂಥ ರಾಸಾಯನಿಕಗಳ ಅಂಶಗಳು ನಮ್ಮ ಆಹಾರದಲ್ಲಿ ಉಳಿದುಕೊಳ್ಳುತ್ತಿವೆ ಎಂದು ಖುದ್ದು ಸರ್ಕಾರದ ವರದಿಗಳೇ ಹೇಳುತ್ತಿವೆ. ಉದಾಹರಣೆಗೆ ಕ್ಲೋರ್‌ಡೇನ್ ನಮ್ಮ ನರಮಂಡಲವನ್ನು ಹಾಳುಗೆಡವಿ ಶ್ವಾಸಕೋಶ, ಯಕೃತ್ತು (ಲಿವರ್), ಮೂತ್ರಪಿಂಡ ವೈಫಲ್ಯಕ್ಕೆ ಕಾರಣವಾಗುತ್ತದೆ. ಬೆಳೆಗಳಿಗೆ ಸಿಂಪಡಿಸಿದ ಕೀಟನಾಶಕಗಳ ಅಂಶ ಆಹಾರದಲ್ಲೂ ಉಳಿದುಕೊಂಡಿರುವುದು ಕಂಡುಬರುತ್ತಿದೆ.

ಕೆಲವು ಕೀಟನಾಶಕಗಳನ್ನು ಇಂಥದ್ದೇ ಬೆಳೆಗೆ ಬಳಸಬೇಕು ಅಥವಾ ಬಳಸಬಾರದು ಎಂಬ ಕಾನೂನು ರೂಪಿಸಲಾಗಿದೆ. ಆರೋಗ್ಯದ ಮೇಲೆ ತೀವ್ರ ಹಾಗೂ ದೀರ್ಘಾವಧಿ ದುಷ್ಪರಿಣಾಮ ಬೀರುವ ಮೊನೊಕ್ರೊಟೋಫಾಸ್ ಅನ್ನು ತರಕಾರಿಗಳಿಗೆ ಬಳಸಬಾರದು. ಆದರೆ ಆಗುತ್ತಿರುವುದು ಏನು? ಬೆಳೆಗೆ ಸಿಂಪಡಿಸುವ ಪೀಡೆನಾಶಕಗಳು ಆಹಾರದಲ್ಲೂ ಉಳಿದುಕೊಳ್ಳುತ್ತಿವೆ; ಹಾಗೂ ನಿಗದಿತ ಮಟ್ಟಕ್ಕಿಂತ ಅಧಿಕ ಪ್ರಮಾಣದಲ್ಲಿ ಅವುಗಳ ಅಂಶ ಪತ್ತೆಯಾಗಿವೆ. ನಮ್ಮ ಆಹಾರ, ನೀರು ಹಾಗೂ ಮಣ್ಣು ಹೇಗೆ ಕಲುಷಿತಗೊಳ್ಳುತ್ತಿದೆ ಎಂಬುದಕ್ಕೆ ಇವು ಕೆಲ ನಿದರ್ಶನಗಳಷ್ಟೇ.

ಸೂಪರ್‌ಮಾರ್ಕೆಟ್ ಅಥವಾ ಮಳಿಗೆಗಳಲ್ಲಿ ಹಣ್ಣು ಹಾಗೂ ತರಕಾರಿಯನ್ನು ಖರೀದಿಸುವಾಗ ಉತ್ತಮವಾದುದನ್ನೇ ಆಯ್ದುಕೊಳ್ಳುವ ನಿಮ್ಮ ಕಾಳಜಿ ನೆನಪಿಸಿಕೊಳ್ಳಿ. ಮನೆ ಮುಂದೆ ಬರುವ ಬೀದಿ ವ್ಯಾಪಾರಿ ಬಳಿಯಲ್ಲೂ ಇಂಥದ್ದೇ ಕಾಳಜಿಯಿಂದ ನೀವು ತರಕಾರಿ, ಸೊಪ್ಪು ಆಯ್ದುಕೊಳ್ಳುತ್ತೀರಲ್ಲವೇ? ಆದರೆ ಅದು ಉತ್ಪಾದನಾ ಹಂತದಲ್ಲಿ ಯಾವ ಯಾವ ರಾಸಾಯನಿಕಗಳನ್ನು ಎಷ್ಟೆಷ್ಟು ಬಾರಿ ಲೇಪಿಸಿಕೊಂಡು ಇಲ್ಲಿಯವರೆಗೆ ಸಾಗಿ ಬಂದಿರುತ್ತದೆ ಎಂಬುದು ನಮಗೆಲ್ಲ ಗೊತ್ತೇ ಇರುವುದಿಲ್ಲ. ಇಂದಿನ ದಿನಗಳಲ್ಲಿ ಕೇವಲ ನೀರು ಕಲುಷಿತವಾಗಿಲ್ಲ; ಬದಲಾಗಿ ನಾವು ಸೇವಿಸುವ ಎಲ್ಲ ಆಹಾರವೂ ವಿಷಯುಕ್ತವಾಗಿರುವ ಸಾಧ್ಯತೆ ಇದೆ.

## ಸರ್ಕಾರ ಗಮನಿಸುತ್ತಿಲ್ಲ...

ಈ ಬಿಕ್ಕಟ್ಟಿಗೆ ಮೂಲಕಾರಣವೆಂದರೆ, ನಮ್ಮ ಹೊಲ– ಗದ್ದೆ– ತೋಟಗಳು. ಬೆಳೆಗಳ ಮೇಲೆ 'ಉಗ್ರ ಕೀಟನಾಶಕ'ಗಳನ್ನು ಯಾವುದೇ ಮಿತಿಯಿಲ್ಲದೇ ಬಳಸುತ್ತಿದ್ದು, ಇದರ ಮೇಲೆ ಸರ್ಕಾರ ನಿಗಾ ವಹಿಸುತ್ತಿಲ್ಲ. ರಾಸಾಯನಿಕಗಳಿಂದ ಆರೋಗ್ಯದ ಮೇಲೆ ಮಾರಕ ಪರಿಣಾಮ ಉಂಟಾಗುತ್ತಿದ್ದರೂ, ಇವುಗಳ ನಿಯಂತ್ರಣಕ್ಕೆ ಸರ್ಕಾರ ಮುಂದಾಗುತ್ತಿಲ್ಲ ಎಂಬುದೇ ಕಳವಳದ ಸಂಗತಿ. ಸರ್ಕಾರದ ಧೋರಣೆಯು ಕೀಟನಾಶಕ ಉತ್ಪಾದನಾ ಕಂಪನಿಗಳ ವಹಿವಾಟು ಹೆಚ್ಚಾಗಲು ಮೂಲಕಾರಣ ಎಂದರೂ ತಪ್ಪಿಲ್ಲ; ಅದೂ ಜನರ ಆರೋಗ್ಯ ಬಲಿ ಕೊಟ್ಟು!!

ಈ ಎಲ್ಲ ಅನಾಹುತದ ಜತೆಗೆ ಈಗ ಕಾಲಿಡುತ್ತಿರುವ ಕುಲಾಂತರಿ ತಳಿಗಳು ಕೃಷಿ ಕ್ಷೇತ್ರದ ವೈವಿಧ್ಯವನ್ನು ನಾಶಪಡಿಸಲು ಮುಂದಾಗಿವೆ. ಈ ಬೆಳೆಯಿಂದ ವಂಶವಾಹಿ (ಜೀನ್) ಕಲಬೆರಿಕೆಯಾದರೆ, ಅದನ್ನು ಮೂಲಸ್ಥಿತಿಗೆ ತರಲು ಸಾಧ್ಯವೇ ಇಲ್ಲ.

ಇದನ್ನು ತಪ್ಪಿಸಲು ಪರ್ಯಾಯ ವಿಧಾನಗಳತ್ತ ಸರ್ಕಾರ ಗಮನಹರಿಸಬೇಕಿದೆ. ಇಂಥ ವಿಧಾನಗಳಿಂದ ಒಂದೆಡೆ ಒಳಸುರಿ ವೆಚ್ಚದಿಂದ ತತ್ತರಿಸಿರುವ ರೈತರು ಕಡಿಮೆ ಆದಾಯದಲ್ಲಿ ಕೃಷಿ ಚಟುವಟಿಕೆ ನಡೆಸಲು ಮುಂದಾಗಬಹುದು; ಇನ್ನೊಂದೆಡೆ ಆರೋಗ್ಯಕ್ಕೆ ಪೂರಕವಾದ ವಿಷಮುಕ್ತ ಆಹಾರವನ್ನು ಜನತೆಗೆ ನೀಡಬಹುದು.

**ಈ ಜಾಗೃತಿಯ ಸಂದೇಶವನ್ನು ಎಲ್ಲೆಡೆ ಹರಡಿರಿ.**

**ನಾವೆಲ್ಲ ಒಗ್ಗಟ್ಟಾಗಿ ಬದಲಾವಣೆ ತರೋಣ**

**ವಿಷಯುಕ್ತ ಆಹಾರ ಬೇಡ ಎನ್ನಿ!**

## ಹೌದು... ಇಲ್ಲೊಂದು ಶುಭಸಮಾಚಾರವಿದೆ!

ರಾಸಾಯನಿಕಗಳಿಗೆ ಪರ್ಯಾಯವಾದ ಕೃಷಿ ವಿಧಾನಗಳ ಬಗ್ಗೆ ಜಗತ್ತಿನಾದ್ಯಂತ ಸಂಶೋಧನೆ ಹಾಗೂ ಪ್ರಯೋಗಗಳು ನಡೆಯುತ್ತಿವೆ. ಇದರಿಂದ ಕೃಷಿ ವೆಚ್ಚ ಕಡಿಮೆಯಾಗುತ್ತದೆ; ಪರಿಸರಕ್ಕೆ ಹಾನಿಯೂ ಕಡಿಮೆಯಾಗುತ್ತದೆ. ಇನ್ನು ಜನತೆಗೆ ಸುರಕ್ಷಿತ ಆಹಾರ ಸಿಗುತ್ತದೆ.

ಉದಾಹರಣೆಗೆ, ಆಂಧ್ರಪ್ರದೇಶದಲ್ಲಿ ಲಕ್ಷಾಂತರ ರೈತರು ರಾಸಾಯನಿಕಗಳ ಗೊಡವೆ ಕೈಬಿಟ್ಟು ನಿಸರ್ಗಸ್ನೇಹಿ ವಿಧಾನದ ಕೃಷಿಯನ್ನು ಅಳವಡಿಸಿಕೊಂಡಿದ್ದಾರೆ. ಇದಕ್ಕೆ 'ಕೀಟನಾಶಕಮುಕ್ತ ಕೃಷಿ ಪದ್ಧತಿ' (ಎನ್‌ಪಿಎಂ) ಎನ್ನುತ್ತಾರೆ. ಇಲ್ಲಿ ನಡೆಸಿದ ಹಲವು ಅಧ್ಯಯನದಿಂದ, ಈ ವಿಧಾನದ ಕೃಷಿಯಲ್ಲಿ ರೈತರಿಗೆ ಆದಾಯ ಹೆಚ್ಚು ಸಿಗುತ್ತದೆ ಎಂಬುದು ಸಾಬೀತಾಗಿದೆ! ಒಂದೊಮ್ಮೆ ಬೆಳೆಗಳಿಗೆ ಕೀಟನಾಶಕ ಬಳಸದೇ ಹೋದರೆ, ನಾವು ಸೇವಿಸುವ ಆಹಾರದಲ್ಲಿ ಕೀಟನಾಶಕದ ಅಂಶ ಉಳಿದಿರುವುದೇ ಇಲ್ಲ!

ಭಾರತ ಸರ್ಕಾರ ರಾಸಾಯನಿಕಗಳತ್ತ ಉದಾರ ಭಾವನೆ ತೋರುವುದನ್ನು ಯಾಕೋ ಕಡಿಮೆ ಮಾಡುತ್ತಿಲ್ಲ. ಈ ಕೃಷಿ ವಿಧಾನಕ್ಕೇ ಹೆಚ್ಚು ಬೆಂಬಲ ಕೊಡುತ್ತಿದೆ. ಹೀಗಾಗಿ ನಾವು ಗ್ರಾಹಕರು ಒಗ್ಗಟ್ಟಾಗಿ ಸುರಕ್ಷಿತ ಆಹಾರಕ್ಕಾಗಿ ಒತ್ತಾಯಿಸೋಣ. ದೇಶದ ನಾಗರಿಕರಾದ ನಮಗೆ 'ಸುರಕ್ಷಿತ ಆಹಾರ' ಪಡೆಯುವ ಹಕ್ಕು ಇದೆ ಎಂಬುದನ್ನು ಮರೆಯಬಾರದು.

## ಬದಲಾವಣೆ ಹರಿಕಾರರಾಗೋಣ... ದುಸ್ಥಿತಿಯನ್ನು ಬದಲಾಯಿಸೋಣ...

ಆಹಾರ ವಿಷಮಯವಾಗಿದೆ. ಇದನ್ನು ನಾವು ದಿನನಿತ್ಯ ಸೇವಿಸುತ್ತಿದ್ದೇವೆ. ನಮ್ಮ ಆರೋಗ್ಯ ಬಲಿಕೊಟ್ಟು, ಕಂಪನಿಗಳ ಲಾಭದ ಪ್ರಮಾಣ ಹೆಚ್ಚುತ್ತಿರುವ ರಾಸಾಯನಿಕ ಕೃಷಿಯನ್ನು ಇನ್ನೆಷ್ಟು ದಿನ ಮುಂದುವರಿಸಬೇಕು? ದೇಶದ ಜನತೆಗೆ 'ಸುರಕ್ಷಿತ ಆಹಾರ' ಕೊಡುವುದು ಸರ್ಕಾರದ ಹೊಣೆ ಎಂಬುದನ್ನು ನೆನಪಿಸಬೇಕು.

ಹೀಗಾಗಿ, ನಾವು ಸರ್ಕಾರಕ್ಕೆ,

- ಸಾವಯವ/ ಸುಸ್ಥಿರ/ ಪರಿಸರಸ್ನೇಹಿ/ ನೈಸರ್ಗಿಕ ಕೃಷಿಗೆ ಉತ್ತೇಜನ ಕೊಡಬೇಕು
- ಕೀಟನಾಶಕಗಳು ಅಥವಾ ಕುಲಾಂತರಿ ಬೆಳೆ ಬೇಡವೇ ಬೇಡ
- ಗರ್ಭಿಣಿಯರು, ಬಾಣಂತಿಯರು, ಶಿಶುಗಳು ಹಾಗೂ ಮಕ್ಕಳಿಗೆ ಸರ್ಕಾರದ ಹಲವು ಯೋಜನೆಗಳ ಮೂಲಕ ಸಾವಯವ ಆಹಾರ ವಿತರಿಸಬೇಕು
- ಬೇರೆ ದೇಶಗಳಲ್ಲಿ ನಿಷೇಧಿಸಲಾದ ಕೀಟನಾಶಕಗಳನ್ನು ನಮ್ಮಲ್ಲೂ ನಿಷೇಧಿಸಬೇಕು

– ಎಂದು ಒತ್ತಾಯಿಸೋಣ. ಸರ್ಕಾರ ಈ ಬಗ್ಗೆ ಶೀಘ್ರ ಕ್ರಮ ಜರುಗಿಸುವಂತೆ ಆಗ್ರಹಿಸೋಣ

**ದಯವಿಟ್ಟು ನೆನಪಿಡಿ:**

**ಈ ಆಂದೋಲನ ನಮಗಷ್ಟೇ ಅಲ್ಲ. ನಮ್ಮ ಪ್ರೀತಿಪಾತ್ರರು, ಆತ್ಮೀಯರ ಒಳಿತಿಗೂ ಹೌದು. ನಮ್ಮ ಮಕ್ಕಳನ್ನು ಆರೋಗ್ಯವಂತರನ್ನಾಗಿ ಬೆಳೆಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ ಕೂಡ...**

ಹೆಚ್ಚಿನ ವಿವರಗಳಿಗೆ ಈ ವೆಬ್‌ಸೈಟ್‌ಗೆ ಲಾಗ್ ಆನ್ ಆಗಿ

**www.indiaforsafefood.in**

ಬದಲಾವಣೆ ಹರಿಕಾರರಾಗಲು ನೀವೇನು ಮಾಡಬೇಕು ಎಂಬುದರ ಬಗ್ಗೆ ಈ ವೆಬ್‌ಸೈಟ್‌ನಲ್ಲಿ ಮಾಹಿತಿ ಲಭ್ಯ. ಇಷ್ಟೇ ಅಲ್ಲ; ಸುರಕ್ಷಿತ ಆಹಾರದ ಬಗ್ಗೆ ಹೆಚ್ಚಿನ ವಿವರಗಳೂ ಇದರಲ್ಲಿವೆ.

ಅಥವಾ

ಈ ಕೆಳಗಿನ ಫೋನ್ ನಂಬರ್‌ಗೆ ಒಂದು ಮಿಸ್ಡ್‌ಕಾಲ್ ಕೊಡಿ

**022 33010031**

ನಿಮ್ಮ ಸಂದೇಶವನ್ನು ನಾವು ಕೃಷಿ ಸಚಿವರಿಗೆ ತಲುಪಿಸುತ್ತೇವೆ

ಸುರಕ್ಷಿತ ಆಹಾರ ನಮ್ಮ ಹಕ್ಕು - ರಾಸಾಯನಿಕ ಬೇಡ - ಕುಲಾಂತರಿಯೂ ಬೇಡ

'ಸುರಕ್ಷಿತ ಆಹಾರಕ್ಕಾಗಿ ಭಾರತ' ಆಂದೋಲನದ ಮಾಹಿತಿ ಮತ್ತು ಸಾವಯವ ಆಹಾರ ಉತ್ಪನ್ನಗಳಿಗೆ ಸಂಪರ್ಕಿಸಿ: **ಸಹಜ ಆರ್ಗ್ಯಾನಿಕ್ಸ್**

569, ಸಜ್ಜನ್ ರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು – 560004
ಫೋನ್: 080 26612315 / 7483088144